ಡಾ॥ ಆರ್. ನಾಗನಗೌಡ.—ಇದಕ್ಕೆ ಸಂಬಂಧಿಸಿದಹಾಗೆ ಈಗ ತಮಗೆಲ್ಲಾ ಎರಡು ಪುಸ್ತಕಗಳನ್ನು ಹಂಚಿದೆ. ಅವುಗಳನ್ನು ನೋಡಿದರೆ ಗೊತ್ತಾಗುತ್ತದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಏಲಕ್ಕಿ ಗಿಡಕ್ಕೆ ರೋಗ ತಗುಲಿದರೆ ಅದರ ಬಗ್ಗೆ ಪರಿಹಾರ ಮಾರ್ಗ ವೇನು ?

ಡಾ॥ ಆರ್. ನಾಗನಗೌಡ.—ಇದರ ಬಗ್ಗೆ ಇಲಾಖೆಯವರು ಈಗಾಗಲೇ ಯೋಚಿಸುತ್ತಿದ್ದಾರೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈ ಏಲಕ್ಕಿ ಬೆಳೆ ದಿನೇ ದಿನೇ ನಷ್ಟವಾಗುತ್ತಿರುವುದರಿಂದ ಈ ಬಗ್ಗೆ ಪರಿಹಾರ ಮಾರ್ಗ ಕಂಡುಹಿಡಿಯಲು ಹೆಚ್ಚಿನ ಸಂಶೋಧನೆ ನಡೆಸುತ್ತೀರಾ ?

ಡಾ॥ ಆರ್. ನಾಗನಗೌಡ.—ಅಗತ್ಯವಾಗಿ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—1953ನೆಯ ಸಾಲಿನಲ್ಲಿ ಜೋಳದ ಬೆಳೆ ಎಷ್ಟು ನಷ್ಟವಾಯಿತು ?

ಡಾ॥ ಆರ್. ನಾಗನಗೌಡ.—ನೋಟೀಸ್.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ತುಮಕೂರು ಜಿಲ್ಲೆಯಲ್ಲಿ ಜೋಳದ ಫಸಲು ಸಂಪೂರ್ಣವಾಗಿ ನಷ್ಟವಾಗಿದೆಯೆಂದು ಹೇಳುತ್ತೇನೆ, ಒಪ್ಪುತ್ತೀರಾ ?

ಡಾ॥ ಆರ್. ನಾಗನಗೌಡ.—ಆ ಬಗ್ಗೆ ಇಲಾಖೆಯವರಿಂದ information ಇಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ಬಗ್ಗೆ ಇರಾಖೆಯವರು ಯಾವ ಗಮನವನ್ನೂ ಕೊಟ್ಟಿಲ್ಲ, ಅಲ್ಲವೇ ?

ಡಾ॥ ಆರ್. ನಾಗನಗೌಡ.—ಆ ರೀತಿ ಖಚಿತವಾಗಿ. ಹೇಳಲು ಸಾಧ್ಯವಿಲ್ಲ.

Mr. SPEAKER.—The next questions No. 998 and No. 1030 may be taken up together.

National Extension Schemes.

Q.—998. **Sri C. H. LINGADEVARU** (Chiknayakanahalli).—

Will the Government be pleased to state :—

(*a*) the names of taluks to which the National Extension Scheme is proposed to be extended during the coming year ;

(*b*) whether they would take steps to extend the said scheme to Chiknayakanahalli Taluk which is a backward taluk in all respects ?

A.—**Dr. R. NAGAN GOWDA** (Minister for Agriculture).—

(*a*) Eight National Extension Service Scheme Blocks are proposed to be opened during the year 1954-55. The places where these Blocks are to be located have not been decided yet.

(*b*) This will be considered when the question of location of the Blocks is taken up.

Q.—1030. **Sri T. N. MUDALAGIRI GOWDA** (Kunigal).—

Will the Government be pleased to state :—

(*a*) the areas recommended by the State Government to the Government of India to be included in Community Projects and National Extension Service Schemes in the year 1954-55 as envisaged in the Five-Year Plan ;

(*b*) whether a resolution was not made in the Ryots' Conference held in 1953 in Tumkur Taluk urging that some hoblies of Tumkur Taluk and Kunigal Taluk should be included in the Community Project Scheme ?

A.—**Dr. R. NAGAN GOWDA** (Minister for Agriculture).—

(*a*) Eight National Extension Service Blocks are proposed to be opened during the year 1954-55. Since the Government of India approval to this has not been received, no recommendation has been made to Government of India regarding the areas to be included under the National Extension Service Scheme.

(*b*) The Government is not aware of any such resolution.

ಶ್ರೀ ಸಿ. ಎಚ್. ಲಿಂಗದೇವರು.—ಈ ಯೋಜನೆಗೆ ಜಾಗಗಳನ್ನು ಗೊತ್ತು ಮಾಡುವುದು ಯಾವಾಗ ?

ಡಾ॥ ಆರ್. ನಾಗನಗೌಡ.—ಅದಕ್ಕಿನ್ನೂ ಕಾಲ ಇದೆ.

ಶ್ರೀ ಸಿ. ಎಚ್. ಲಿಂಗದೇವರು.—ಅದು ಎಷ್ಟು ದಿನದಲ್ಲಿ ಆಗಬಹುದು ?

ಡಾ॥ ಆರ್. ನಾಗನಗೌಡ.—ಈ ಬಿಸಿಲು ಕಾಲದಲ್ಲಿ ಆಗಬಹುದು.

ಶ್ರೀ ಸಿ. ಎಚ್. ಲಿಂಗದೇವರು.—ಜಾಗಗಳನ್ನು ಆರಿಸಿ ಗೊತ್ತುಮಾಡುವುದಕ್ಕೆ ಯಾವುದಾದರೂ ನೀತಿ, ನಿಯಮ ಉಂಟೇ ?

ಡಾ॥ ಆರ್. ನಾಗನಗೌಡ.—ಇದೆ.

ಶ್ರೀ ಸಿ. ಎಚ್. ಲಿಂಗದೇವರು.—ಅದು ಯಾವುದು ?

ಡಾ॥ ಆರ್. ನಾಗನಗೌಡ.—ಇದಕ್ಕೆ ಅನುಕೂಲವಾದ ವಾತಾವರಣ ಎಲ್ಲಿರುತ್ತದೋ ಅದನ್ನು ನೋಡಿಕೊಂಡು ಮಾಡುತ್ತೇವೆ. ಈ ವರ್ಷ ಏಳು, ಬರುವ ವರ್ಷ ಎಂಟು, ಅದರ ಮುಂದಿನ ವರ್ಷ ಹನ್ನೆರಡು ಈ ರೀತಿ ಪ್ರಾರಂಭಿಸಬೇಕೆಂದಿದೆ. ಅಂತೂ ಈ ನ್ಯಾಷನಲ್ ಎಕ್ಸ್‌ಟೆನ್ಷನ್ ಸ್ಕೀಮನ್ನು ಸಾಧ್ಯವಾದಮಟ್ಟಿಗೂ ಹೆಚ್ಚಿಸಿಕೊಂಡು ಹೋಗಿ ಒದಗುವ ಹಣಕ್ಕೆ ತಕ್ಕಹಾಗೆ ಮುಂದುವರಿಸಿಕೊಂಡು ಹೋಗಬೇಕೆಂದಿದ್ದೇವೆ.

ಶ್ರೀ ಸಿ. ಎಚ್. ಲಿಂಗದೇವರು.—ಮೊದಲು selection ಮಾಡಬೇಕಾದರೆ ಯಾವ ಆಧಾರದಮೇಲೆ ಮಾಡುತ್ತೀರಿ ?

Mr. SPEAKER.—You know it.